

## ಬೊಂಬೆಯ ಕಣ್ಣುಗಳು

ಬಿಳಿ ಕಾಯಿಗಳು, ಆ ಕಾಯಿಗಳ ಮೇಲಿನ ಕಪ್ಪು ಚುಕ್ಕೆಗಳು ಬೊಂಬೆಯ ಕಣ್ಣುಗಳನ್ನೇ ಹೋಲುವುದರಿಂದ ಇದಕ್ಕೆ 'ಡಾಲ್ಸ್ ಐ' ಎಂದು ಕರೆಯಲಾಗಿದೆ. ಒಂದೇ ಕಾಂಡದಲ್ಲಿರುವ ಕಣ್ಣುಗಳ ಸಮೂಹದಂತೆ ಈ ಗಿಡ ಗೋಚರಿಸುತ್ತದೆ. ಇದರ ವಿಚಿತ್ರ ರೂಪ ಮಾತ್ರವಲ್ಲ, ಇದರಲ್ಲಿನ ನಿದ್ರಾಜನಕ ಅಂಶ ಮನುಷ್ಯರಿಗೆ ವಿಷಕಾರಿಯಾಗಿದೆ. ಆದರೆ ಪ್ರಾಣಿ, ಪಕ್ಷಿಗಳಿಗೆ ಇದರಿಂದ ಯಾವುದೇ ಅಪಾಯವಿಲ್ಲ.

## ಇಬ್ಬನಿಯೆ ಹೂವಾಗಿ...

ಅಂಟಿಕೊಳ್ಳುವ ದ್ರವದೊಂದಿಗೆ ಸುಂದರ ರಚನೆಯನ್ನು ಹೊಂದಿರುವ ಇದರ ಹೆಸರು 'ಸನ್‌ಡ್ಯೂ'. ಸೈಬೀರಿಯಾ, ಉತ್ತರ ಅಮೆರಿಕ, ಕೊರಿಯಾದಲ್ಲಿ ಕಂಡುಬರುವ ಈ ಪ್ರಭೇದ, ಇಬ್ಬನಿ ತುಂಬಿದ ಹೂವಿನಂತೆಯೇ ಕಾಣುತ್ತದೆ. ಅಂಟಿಕೊಳ್ಳುವ ದ್ರವವನ್ನೇ ಮಕರಂದದಂತೆ ಬಳಸಿಕೊಳ್ಳುತ್ತದೆ. ಸಣ್ಣ ಕೂದಲಿನಂಥ ರಚನೆ ಈ ಸಸ್ಯಕ್ಕಿದ್ದು, ಇದರೊಳಗಿನ ದ್ರವದಿಂದ ಸಹಾಯದಿಂದ ಕೀಟಗಳನ್ನು ಸೆಳೆದುಕೊಳ್ಳಬಲ್ಲದು.



## ನಾಗರಹಾವೇ...

ಮಾಂಸಾಹಾರಿ ಸಸ್ಯಗಳಲ್ಲಿ 'ಕೋಬ್ರಾ ಲಿಲ್ಲಿ' ಕೂಡ ಒಂದು. ಇದನ್ನು 'ಕ್ಯಾಲಿಫೋರ್ನಿಯನ್ ಪಿಚರ್ ಪ್ಲಾಂಟ್' ಎಂದೂ ಕರೆಯುತ್ತಾರೆ. ಜೌಗು ಪ್ರದೇಶಗಳಲ್ಲಿ ಹೆಚ್ಚಾಗಿ ಬೆಳೆಯುವ ಈ ಸಸ್ಯ ನಾಗರ ಹಾವಿನ ಹೆಡೆಯನ್ನೇ ಹೋಲುತ್ತದೆ. ಸಸ್ಯದ ಮೇಲ್ಭಾಗ ಕೊಳವೆಯಾಕಾರದಲ್ಲಿದ್ದು, ಹಾವಿನ ಹೆಡೆಯಂತೆಯೇ ಇದೆ. ಗಿಡದಿಂದ ಚಾಚಿಕೊಂಡ ಭಾಗ ಹಾವಿನ ನಾಲಗೆಯಂತೆ ಕಾಣುತ್ತದೆ. ಹೀಗಾಗಿಯೇ ಸಸ್ಯಕ್ಕೆ 'ಕೋಬ್ರಾ ಲಿಲ್ಲಿ' ಎಂಬ ಅನ್ವರ್ಥನಾಮ. ಒಮ್ಮೆ ಕೀಟವು ಗಿಡದ ಒಳಗೆ ಹೋಗುತ್ತಿದ್ದಂತೆ, ಹೊರಗೆ ತಿರುಗಿ ಬರದಂತೆ ಕೊಳವೆಯಾಕಾರದಲ್ಲಿ ಸಿಲುಕಿಸುವುದು ಈ ಗಿಡದ ವಿಶೇಷ.



## ಹೂವಿನ ಬಲೆಯಲ್ಲಿ...



ಮಾಂಸಾಹಾರಿ ಸಸ್ಯಗಳಲ್ಲೇ ಅತಿ ವಿಶಿಷ್ಟ ಸಸ್ಯ 'ವೀನಸ್ ಫ್ಲೈ ಟ್ರ್ಯಾಪ್'. ಕೀಟಗಳನ್ನು ಸೆರೆಹಿಡಿಯುವ ಈ ಗಿಡದ ತಂತ್ರವೇ ಇದರ ವಿಶೇಷ. ಇದೇ ಕಾರಣಕ್ಕೇ ವಿಕಾಸವಾದದ ಪ್ರತಿಪಾದಕ ಚಾರ್ಲ್ಸ್ ಡಾರ್ವಿನ್ ಈ ಸಸ್ಯವನ್ನು 'ವಿಶ್ವದ ಅತ್ಯದ್ಭುತ' ಎಂದು ವರ್ಣಿಸಿರುವುದು. ಈ ಸಸ್ಯದ ಮೇಲೆ ಯಾವುದೇ ಕೀಟ ಬಂದು ಕೂರುತ್ತಿದ್ದಂತೆ, ಸಸ್ಯದ ಮೇಲಿನ ಸಣ್ಣ ಸಣ್ಣ ಕೂದಲುಗಳು ಚುರುಕಾಗಿ, ರೆಕ್ಕೆಗಳನ್ನು ಮುಚ್ಚಿಕೊಳ್ಳುವಂತೆ ಮಾಡುತ್ತವೆ. ಕೀಟವನ್ನು ಒಳಗೆ ಸೆಳೆದುಕೊಂಡು ಕೀಟದ ಮೃದುವಾದ ಕೋಶವನ್ನು ಕಿಣ್ವದ ಸಹಾಯದಿಂದ ಜೀರ್ಣಿಸಿಕೊಳ್ಳುತ್ತದೆ.



## ಭೂತವಲ್ಲ, ಶಿಲೀಂಧ್ರ!

'ಘೋಸ್ಟ್ ಸಸ್ಯ'– ಹೆಸರೇ ಹೇಳುವಂತೆ, ಬಿಳಿ– ತೆಳು ಬಣ್ಣದಿಂದ ಭೂತದಂಥ ರೂಪವನ್ನು ಈ ಸಸ್ಯ ಹೊಂದಿದೆ. ಇದು ಮೂಲತಃ ಸಸ್ಯವಲ್ಲ, ಶಿಲೀಂಧ್ರ. ಇದರಲ್ಲಿ ಬಣ್ಣವನ್ನು ತಂದುಕೊಡುವ ಕ್ಲೋರೊಫಿಲ್ ಕಾಣೆಯಾಗಿದ್ದು, ದ್ಯುತಿ ಸಂಶ್ಲೇಷಣೆ ಅಗತ್ಯ ಕೂಡ ಇದಕ್ಕಿಲ್ಲ. ಹೀಗಾಗಿ ಇದಕ್ಕೆ ಯಾವುದೇ ಬಣ್ಣವೂ ಇಲ್ಲ. ಜೊತೆಗೆ, ಪರಾವಲಂಬಿ. ಪರಾವಲಂಬನೆಯಿಂದ ಪೋಷಕಾಂಶವನ್ನು ಪಡೆದು ಕಗ್ಗತ್ತಲ ಕಾಡಿನಲ್ಲೂ ಆರಾಮಾಗಿ ಬೆಳೆಯುತ್ತವೆ.

ಆಕರ: ನ್ಯಾಚುರಲ್ ಹಿಸ್ಟರಿ ಮ್ಯೂಸಿಯಂ